307

ಮೈಸೂರ ಗೆಜಿಟ್.

ಸಂ. 42] ಸರ್ಕಾರದಿಂದ ಪ್ರಾಯಿಷ್ ಆದ್ದು [ನಂ. 34

ಬೆಂಗಳೂರು, ಗುರುವಾರ, ಆಗಸ್ಟ್ ತಾ॥ 22, ಸ್ಯ 1907.

IIIನ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ಮೆಂಟು.

ಲೆಜಿಸ್ಲೆಟಿವು ಇಲಾಖೆ.

ತಾರೀಖು 2ನೆ ಆಗಸ್ಟು 1907.

ನಂ. 963—ಸ್ಯಾನಿಟರಿ. 171-06-8, 1897ನೆ ಇಸವಿಯ 2ನೆ ನಂಬರ್ ಸಾಂಕ್ರಾಮಿಕ ಉದ್ರವಗಳ ರೆಗ್ಯುಲೇಷನಿನ 2ನೆ ಪ್ರಕರಣದ 1ನೆ ಒಳಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, ಪ್ಲೇಗು ತಗುಲಿದ ಯಾವ ಪ್ರದೇಶದಿಂದಲೂ ಮೈಸೂರು ಸಂಸ್ಥಾನದೊಳಕ್ಕೆ ತಾಸಿದ ನಾರು ಬಟ್ಟೆಯನ್ನೂ, ಉದಯೋಗಿಸಿದ ಹಾಸಿಗೆಯನ್ನೂ (ಪ್ರಯಾಣೀಕರು ತಮ್ಮ ಸ್ವಂತ ಸಾಮಾನಿನಂತೆ ತೆಗೆದುಕೊಂಡು ಹೋಗುವುದು ಹೊರತು), ಹರಕು ಬಟ್ಟೆಗಳನ್ನೂ ಮತ್ತು ಕಂಡು ಕಾಗದಗಳನ್ನೂ ಆಮದು ಮಾಡಕೂಡದೆಂತಲೂ, ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲಿರುವ ಸ್ಥಳಗಳಿಂದ ಅವುಗಳನ್ನು ರಫ್ತು ಮಾಡಕೂಡದೆಂತಲೂ, ಮತ್ತು ಮೈಸೂರು ಸಂಸ್ಥಾನದಲ್ಲಿ ಪ್ಲೇಗು ತಗುಲದೇ ಇರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಸ್ಥಳಗಳಿಂದ ಅಂಥಾ ಸಾಮಾನುಗಳನ್ನು ಸಾಗಿಸಕೂಡದೆಂತಲೂ ನಿಷೇಧಿಸಿ ಹುಕುಂ ದಯಪಾಲಿಸಿರುತ್ತಾರೆ:—

ಈ ಇನ್ಸ್ಟ್ರಕ್ಷನ್ನಿಗೆ ವಿರೋಧವಾಗಿ ರಫ್ತು ಮಾಡಲ್ಪಟ್ಟ, ಆಮದು ಮಾಡಲ್ಪಟ್ಟ ಅಥವಾ ಸಾಗಿಸಲ್ಪಟ್ಟ ಮಾಲುಗಳು, ಅವುಗಳಿಗೆ ಜವಾಬ್ದಾರಿಯಾದ ಜನವನ್ನು ನಷ್ಟಕ್ಕೆ ಗುರಿಮಾಡಿ, ಸ್ಥಳೀಯ ಅಧಿಕಾರಿಗಳಿಂದ ಹಿಡಿಯಲ್ಪಡುವುದಕ್ಕೆ ಅಥವಾ ನಾಶಮಾಡಲ್ಪಡುವುದಕ್ಕೆ ಗುರಿಯಾಗತಕ್ಕದ್ದು.

ಹುಕುಂ ಬಮೋಜೀಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.